ಕೇಳುವುದೇ ಅವನ ಕೆಲಸ. ಕಥನಕ್ಕೂ ತನ್ನದೇ ವ್ಯಾನಿಟಿಯ, ಜಂಭದ ಕೊಬ್ಬು ಬರುವ ಸಾಧ್ಯತೆ ಇರುತ್ತದೆ. ಆ ಬಲೂನಿಗೆ ಸೂಜಿ ಮೊನೆ ಚುಚ್ಚುವುದೂ ಅವನ ಕೆಲಸ.

ಛದ್ಮಗಾರಿಕೆಗೇ ಒಂದು ದಾರ್ಶನಿಕ ಶುಶ್ರೂಷೆ ನೀಡಿದ ಮಹಾನ್ ಕೋಡಂಗಿ ಚಾರ್ಲಿ ಚಾಪ್ಲಿನ್! ರಾಜ್ ಕಪೂರ್‌ನ 'ತನ್ನ ನೋವನ್ನು ಮರೆಸಿ ಲೋಕವನ್ನು ನಗಿಸುವ ಜೋಕರ್'ನ ಕಲ್ಪನೆ ಸ್ವಲ್ಪ ಸರಳೀಕೃತವಾದದ್ದು. ದಶಕಗಳಷ್ಟು ತಯಾರಿ ಮಾಡಿ ರೂಪಿಸಿದ್ದ ಅವನ ಮಹತ್ವಾಕಾಂಕ್ಷೆಯ ಮೂರಂಕಿನ 'ಮೇರಾ ನಾಮ್ ಜೋಕರ್' ಜನಮನ್ನಣೆ ಪಡೆಯದೇ ಹೋದ ಬಗ್ಗೆ ಸಾಕಷ್ಟು ಜಿಜ್ಞಾಸೆ ನಡೆದಿದೆ. ನನ್ನ ಪ್ರಕಾರ ಅದರ ಸೋಲಿಗೆ ಎರಡು ಮಧ್ಯಂತರಗಳ ಕಥನದ ಸುದೀರ್ಘತೆ ಅಥವಾ ಭಗ್ನ ಪ್ರೇಮದ ಸರಮಾಲೆ – ಇವು ಕಾರಣವಲ್ಲ. ಬದಲಿಗೆ ಚಿತ್ರದುದ್ದಕ್ಕೂ ಮೆರೆದ ಕೋಡಂಗಿಯ ಆತ್ಮಮರುಕ ಅಥವಾ ಆತ್ಮಸಮ್ಮೋಹ. ಅದೇ ಆ ಚಿತ್ರದ ಜೀವಾಂಶವನ್ನು ನಿಸ್ತೇಜಗೊಳಿಸಿತು. ತನಗಾದ ಗಾಯಗಳನ್ನು ಸಿಂಗರಿಸಿಕೊಂಡು ಸಹಾನುಭೂತಿಗಾಗಿ ಯಾಚಿಸುವ ಜೋಕರ್ ವೀಕ್ಷಕನನ್ನು ಸೆಳೆದು ಬಿಡುಗಡೆ ಮಾಡಲಿಲ್ಲ . ಹಾಗೆ ನೋಡಿದರೆ, 'ಚೋರ ಚರಣದಾಸ' ನಾಟಕದ ಕಳ್ಳ ಚರಣದಾಸ, ಚಾಪ್ಲಿನ್ ಶಾಲೆಯ ಅದ್ಭುತ ಪಾತ್ರ. ಶೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಬರುವ ಮೂರ್ಖ, ಮೃಚ್ಛಕಟಿಕದ ಅಸಂಗತ ಶಕಾರ, ತೆನಾಲಿರಾಮ, ಮುಲ್ಲಾ ನಸ್ರುದ್ದೀನ್, ಬೀರಬಲ್ – ಇವರೆಲ್ಲ ಅಂಥ ಛದ್ಮಭೂಷಣರೇ. ಆತ್ಮವಿಮುಖತೆಯೇ ಅವರೆಲ್ಲರ ಛದ್ಮಗಾರಿಕೆಯ ಚಿಮ್ಮುಹಲಗೆ.

ಆತ್ಮ ನಿವೇದನೆ, ಆತ್ಮ ಪರಾಮರ್ಶೆ, ಆತ್ಮ ವಿಮುಖತೆ ಎಂದು ಹೇಳುವಾಗ ಈ ಆತ್ಮ ಅನ್ನೋದು ಕೇವಲ ಒಬ್ಬ ವ್ಯಕ್ತಿಯ ಅಥವಾ ಪಾತ್ರದ ಅಥವಾ ಪ್ರತಿಪಾದಕನ ಅಥವಾ ನಿರೂಪಕನ ಆತ್ಮವಾಗದೆ ಎಲ್ಲರಲ್ಲೂ ಬೆರೆತು ಹೋಗಿರುವ ಸಂಯುಕ್ತವಾದ ಆತ್ಮ ಎಂದು ಅಂದುಕೊಂಡರೆ ಮಾತ್ರ ಅಲ್ಲಿ ದರ್ಶನದ ಸಾಧ್ಯತೆ ಇದೆ. ಆತ್ಮ ವಿಮುಖತೆಯೇ ಎಲ್ಲ ಕಲೆಯ ಹವಣು, ಚಡಪಡಿಕೆ. ಸ್ವಂತದಿಂದ ವಿಮುಖನಾದಾಗಲೇ ಅವನು ಕೋಡಂಗಿ! ಆಗಲೇ ಆತ ಮನುಜ ಸಮಾಜದ ಆತ್ಮಸಾಕ್ಷಿಯಾಗುತ್ತಾನೆ. ಸೂಕ್ಷ್ಮಗೆರೆ ದಾಟುವ ಮಾಯಾ ಕ್ಷಣ ಅದು. ಕೋಡಂಗಿಯ ಛದ್ಮಗಾರಿಕೆ ಎಲ್ಲ ಕಲೆಗಳ ಆತ್ಯಂತಿಕ ನೆಲೆಯ ಸೂಕ್ಷ್ಮರೂಪಕ. 'ದರ್ಶನ' ಕಲೆಯಾಗಬೇಕಿದ್ದ ಎಲ್ಲವೂ ಹುಲು 'ಪ್ರದರ್ಶನ' ಕಲೆ ಮಾತ್ರ ಆಗಿ ಬಿಡುತ್ತಿರುವ ಇಂದಿನ ಸಂಕಟದ ಮೂಲ ಕಾರಣ: ಕೇವಲ ಓರ್ವನಲ್ಲೇ ಮನೆಮಾಡಿದೆ ಎಂದುಕೊಂಡ ಆತ್ಮದ ಕುರಿತ ವ್ಯಾಮೋಹವೇ ಆಗಿದೆ. ಚೂರು ಕಣ್ಣುಜ್ಜಿ, ಕಣ್ಣೆತ್ತಿ ಆಚೆ ನೋಡಿದರೂ ಸಾಕು, ಸುಗ್ಗಿಯ ಹಗರಣದ ಸಂತೆಯಲ್ಲಿ ವ್ಯಾನಿಟಿ ಬ್ಯಾಗ್ ತಿರುಗಿಸುತ್ತಿರುವ 'ಲೇಡಿ' ನಮ್ಮನ್ನು ಛಕ್ಕೆಂದು ಗೆರೆ ದಾಟಿಸಿ ಬಿಡಬಹುದು.

---

## ಜಯಂತ ಕಾಯ್ಕಿಣಿ

ವಿಶಿಷ್ಟ ಕತೆ, ಕವನ, ಪ್ರಬಂಧ, ಸಿನಿಗೀತೆಗಳನ್ನು ಕನ್ನಡಕ್ಕೆ ಕೊಟ್ಟಿರುವ ಜಯಂತ ಉತ್ತರ ಕನ್ನಡದ ಗೋಕರ್ಣದವರು. 'ತೆರೆದಷ್ಟೆ ಬಾಗಿಲು', 'ದಗಡೂ ಪರಬನ ಅಶ್ವಮೇಧ', 'ಅಮೃತಬಳ್ಳಿ ಕಷಾಯ', 'ಬಣ್ಣದ ಕಾಲು', 'ತೂಫಾನ್ ಮೇಲ್', 'ಚಾರ್‌ಮಿನಾರ್', 'ಅನಾರ್ಕಲಿಯ ಸೇಫ್ಟಿಪಿನ್' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಕೋಟಿತೀರ್ಥ, 'ಶ್ರಾವಣ ಮಧ್ಯಾಹ್ನ', 'ನೀಲಿ ಮಳೆ', 'ಒಂದು ಜಿಲೇಬಿ', 'ವಿಚಿತ್ರಸೇನನ ವೈಖರಿ' ಅವರ ಕವನ ಸಂಕಲನಗಳಾದರೆ, 'ಬೊಗಸೆಯಲ್ಲಿ ಮಳೆ', 'ಶಬ್ದ ತೀರ', 'ಟೂರಿಂಗ್ ಟಾಕೀಸ್' 'ಗುಲ್‌ಮೊಹರ್' ಅವರ ಅಂಕಣ ಬರಹಗಳ ಪುಸ್ತಕಗಳಾಗಿವೆ.